# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ : director.ahr.kptcl@gamil.com

ನಿಗಮದ ಗುರುತಿನ ಸಂಖ್ಯೆ: (ಸಿ.ಐ.ಎನ್.); ಯು40109ಕೆಎ1999ಎಸ್‌ಜಿಸಿ925521

ಕಂಪನಿ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ: ಕೆವಿಪ್ರನಿನಿ/ಬಿ117/25729/2021-22/1804-1890
ಲಗತ್ತು: -

ದಿನಾಂಕ: 27-02-2023

## ಸುತ್ತೋಲೆ

ವಿಷಯ: NCLT ಪ್ರಕರಣಗಳ ನಿರ್ವಹಣೆ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿದ್ಯುತ್ ಉತ್ಪಾದಕರು ತಾವು ಉತ್ಪಾದಿಸುವ ವಿದ್ಯುತ್‌ನ್ನು ಮುಕ್ತ ಪ್ರವೇಶ ಅಧಿಕಾರದ(Open Access) ಮೂಲಕ ಪೂರೈಕೆಯನ್ನು ಮಾಡುತ್ತಿದ್ದು, ಇದಕ್ಕೆ KERC ಮತ್ತು CERC ನಿಯಮಾನುಸಾರ ನಿಗಧಿತ ಶುಲ್ಕಗಳನ್ನು ಪಾವತಿಸಬೇಕಾಗಿರುತ್ತದೆ. ಹಲವು ವಿದ್ಯುತ್ ಉತ್ಪಾದಕರು KERC ಮತ್ತು CERCಗಳ ನಿಯಮಗಳ ಅನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸದೇ, ಸದರಿ ಆದೇಶಗಳ ವಿರುದ್ಧ ಆಯೋಗಗಳು/ನ್ಯಾಯಾಧೀಕರಣ/ವಿವಿಧ ನ್ಯಾಯಾಲಯಗಳಲ್ಲಿ ದಾವೆಗಳನ್ನು ಹೂಡಿರುತ್ತಾರೆ. ಈ ದಾವೆಗಳು ಸಂಬಂಧಿಸಿದ ನ್ಯಾಯಾಲಯಗಳಲ್ಲಿ ಇನ್ನು ಬಾಕಿ ಇರುವ ಹಂತದಲ್ಲಿಯೇ, ಹಲವು ವಿದ್ಯುತ್ ಉತ್ಪಾದಕರು NCLT ಮುಂದೆ ತಮ್ಮ ಕಂಪನಿಯು ದಿವಾಳಿಯಾಗಿರುವ ಬಗ್ಗೆ ಅರ್ಜಿ ಸಲ್ಲಿಸಿರುತ್ತಾರೆ. NCLT ಯು ಸದರಿ ಪ್ರಕರಣಗಳಲ್ಲಿ Resolution Professional ರವರುಗಳನ್ನು ನೇಮಕ ಮಾಡಿ Insolvency CIRP ನಡಾವಳಿಯನ್ನು NCLT ಪೂರ್ಣಗೊಳಿಸಿರುವುದು ನಿಗಮದ ಗಮನಕ್ಕೆ ಬಾರದಿರುವುದನ್ನು ಗಮನಿಸಲಾಗಿದೆ. ಹೀಗಾಗಿ ನಿಗಮಕ್ಕೆ ವಿದ್ಯುತ್ ಉತ್ಪಾದಕರಿಂದ ಬರಬೇಕಾದ ಕ್ಲೇಮ್‌ಗಳನ್ನು Resolution process ಸಮಯದಲ್ಲಿ ದಾಖಲಿಸದೆ ಇರುವುದರಿಂದ ಹಾಗೂ CIRP ಪ್ರಕ್ರಿಯೆಯು ಸಂಪೂರ್ಣವಾಗಿ ಮುಗಿದಿರುವ ಕಾರಣ ಕವಿಪ್ರನಿನಿಗೆ ಬರಬೇಕಾಗಿರುವ ಮೊತ್ತವನ್ನು ಪಡೆಯಲು ಸಾಧ್ಯವಾಗುವುದಿಲ್ಲವೆಂದು ಕೆಲವು ಪ್ರಕರಣಗಳಲ್ಲಿ Resolution Professional ರವರುಗಳು ತಿಳಿಸಿರುತ್ತಾರೆ.

ಈ ರೀತಿಯ ಪ್ರಕರಣಗಳು ಪುನರಾವರ್ತನೆ ಆಗುವುದನ್ನು ತಡೆಗಟ್ಟಲು NCLT ಮುಂದೆ ದಾಖಲಿಸಲ್ಪಡುವ ಪ್ರಕರಣಗಳ ಬಗ್ಗೆ ಸೂಕ್ತ ಮಾಹಿತಿ ಪಡೆಯಲು ಹಾಗೂ ಸಕಾಲದಲ್ಲಿ ಕ್ಲೇಮ್ ಸಲ್ಲಿಸಲು ಸಾಧ್ಯವಾಗುವಂತೆ ಈ ಕೆಳಕಂಡ ವಿಧಾನವನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿ, ಈ ಸುತ್ತೋಲೆಯನ್ನು ಹೊರಡಿಸಲಾಗಿದೆ.

1) ಎಲ್ಲಾ ಟಿಎಲ್ ಅಂಡ್ ಎಸ್‌ಎಸ್ ವಿಭಾಗಗಳು/ಬೃಹತ್ ಕಾಮಗಾರಿ ವಿಭಾಗಗಳು/ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಲೆಕ್ಕಪತ್ರಗಳ ಘಟಕಗಳು ಮತ್ತು ನಿಗಮ ಕಚೇರಿಯ ಲೆಕ್ಕ ಘಟಕಗಳನ್ನೊಳಗೊಂಡಂತೆ ಕಡ್ಡಾಯವಾಗಿ ಒಬ್ಬ ಹಿರಿಯ ಸಹಾಯಕ/ಸಹಾಯಕ ಲೆಕ್ಕಾಧಿಕಾರಿ/ಲೆಕ್ಕಾಧಿಕಾರಿ ಮಟ್ಟದ ನೌಕರ/ಅಧಿಕಾರಿಯನ್ನು ನೇಮಿಸಿ, NCLT ಪ್ರಕರಣಗಳು ದಾಖಲಾಗಿರುವ ಬಗ್ಗೆ IBBI Websiteನ್ನು ಪ್ರತಿದಿನ ವೀಕ್ಷಿಸಿ ತಮ್ಮ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಉತ್ಪಾದಕರು/ಗುತ್ತಿಗೆದಾರರು/ ಸರಬರಾಜುದಾರರು ಪ್ರಕರಣ ದಾಖಲಿಸಿರುವ ಬಗ್ಗೆ ತಮ್ಮ ಮೇಲಾಧಿಕಾರಿಗೆ ವಾರಕ್ಕೊಮ್ಮೆ ತಪ್ಪದೇ ಮಾಹಿತಿ ನೀಡುವಂತೆ ಆಯಾ ಕಚೇರಿಯ ಮುಖ್ಯಸ್ಥರು ಆದೇಶ ಹೊರಡಿಸುವುದು. ವೆಬ್‌ಸೈಟ್‌ನಲ್ಲಿ ಪರಿಶೀಲಿಸುವ ಕ್ರಮದ ಬಗ್ಗೆ ವಿವರಗಳನ್ನು ಈ ಕಚೇರಿಯ ಪತ್ರದ ಸಂಖ್ಯೆ:ಬಿ118/37548/22-23 ದಿನಾಂಕ:25.05.2022ರಲ್ಲಿ ಈಗಾಗಲೇ ತಿಳಿಸಲಾಗಿದ್ದು, ಸ್ಥೂಲವಾಗಿ ಈ ಕೆಳಕಂಡಂತೆ ಇರುತ್ತದೆ.

ಪು.ತಿ.ನೋ.

www.ibbi.gov.in

↓

Corporate Process

↓

Public Announcement

↓

ಕವಿಪ್ರನಿನಿಗೆ ಬಾಕಿ ಉಳಿಸಿಕೊಂಡಿರುವ ವಿದ್ಯುತ್ ಉತ್ಪಾದಕರ/ಗುತ್ತಿಗೆದಾರರ/ಸರಬರಾಜುದಾರರ ಹೆಸರನ್ನು ಹುಡುಕುವುದು(Search Option ಮೂಲಕ ಹುಡುಕುವುದು) ಕಾರ್ಪೋರೇಟ್ ಐಡೆಂಟಿಟಿ ನಂಬರ್ (CIN) ಮಾಹಿತಿ ಇದ್ದಲ್ಲಿ ಅದನ್ನೂ ಸಹ ಬಳಸಿ ಹುಡಕಬಹುದು.

2) ಈ ಮಾಹಿತಿ ದೊರೆತ ನಂತರ ಸಂಬಂಧಪಟ್ಟ ಮೇಲಾಧಿಕಾರಿಗಳು ತಕ್ಷಣವೇ ಕಾರ್ಯಪ್ರವೃತ್ತರಾಗಿ ದಾಖಲಾಗಿರುವ ಪ್ರಕರಣಕ್ಕೆ ನೇಮಿಸಲ್ಪಟ್ಟಿರುವ Resolution Professional ನ್ನು ಸಂಪರ್ಕಿಸಿ ಕವಿಪ್ರನಿನಿಗೆ ಬರಬೇಕಾಗಿರುವ ಅಥವಾ ಬಾಕಿ ಇರುವ ಮೊತ್ತದ ಬಗ್ಗೆ ನಿಗದಿತ ನಮೂನೆಯಲ್ಲಿ ಕ್ಲೇಮ್ ದಾಖಲಿಸುವುದು.

3) NCLTನಲ್ಲಿ ದಾಖಲಾಗಿರುವ ಪ್ರಕರಣಗಳ ಬಗ್ಗೆ ಸಂಬಂಧಪಟ್ಟ ವೃತ್ತ ಕಚೇರಿಯ ಮಟ್ಟದಲ್ಲಿ ಕ್ರೋಢೀಕರಿಸಿ ಮಾಹಿತಿಯನ್ನು ಮಾಸಿಕವಾಗಿ ವಲಯ ಮುಖ್ಯ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿಯವರಿಗೆ ಕಳುಹಿಸುವುದು.

4) ವಲಯ ಮಟ್ಟದಲ್ಲಿ ಮುಖ್ಯ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿಯವರು ಈ ಬಗ್ಗೆ ಪ್ರತಿ ಮಾಸಿಕ ಸಭೆಯಲ್ಲಿ ಪರಿಶೀಲನೆ ನಡೆಸಿ, ಸೂಕ್ತ ನಿರ್ದೇಶನಗಳನ್ನು ನೀಡತಕ್ಕದ್ದು.

5) ವಲಯದ ಮುಖ್ಯ ಇಂಜಿನಿಯರ್(ವಿ)ರವರು ತಮ್ಮ ವಲಯದಲ್ಲಿರುವ ಮಾಹಿತಿಯನ್ನು ಕ್ರೋಢೀಕರಿಸಿ ತ್ರೈಮಾಸಿಕವಾಗಿ ಈ ಕೆಳಸಹಿದಾರರಿಗೆ ಕಳುಹಿಸಿ ಕೊಡುವುದು.


6) CIRP ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲು CIRP Regulation 2016 ಮತ್ತು Insolvency and Bankruptcy Code, 2016 ಇವುಗಳನ್ನು www.ibbi.gov.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಓದಲು ಸೂಚಿಸಲಾಗಿದೆ.


"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ.,
ರವರ ಅನುಮೋದನೆ ಮೇರೆಗೆ"


ನಿರ್ದೇಶಕರು(ಆ ಮತ್ತು ಮಾ.ಸಂ),
ಕವಿಪ್ರನಿನಿ., ನಿಗಮ ಕಾರ್ಯಾಲಯ,
ಕಾವೇರಿ ಭವನ, ಬೆಂಗಳೂರು.


**ಪ್ರತಿಗಳು:**

1. ಎಲ್ಲಾ ಮುಖ್ಯ ಇಂಜಿನಿಯರುಗಳು(ವಿ)/ನಿಯಂತ್ರಣಾಧಿಕಾರಿಗಳು, ರಾಜ್ಯ ವಿದ್ಯುತ್ ರವಾನೆ ಕೇಂದ್ರ/ಪ್ರಸರಣ ವಲಯಗಳು, ಕವಿಪ್ರನಿನಿ., ಬೆಂಗಳೂರು/ಮೈಸೂರು/ತುಮಕೂರು/ಬಾಗಲಕೋಟೆ/ಹಾಸನ/ಕಲಬುರಗಿರವರ ಸೂಕ್ತ ಕ್ರಮಕ್ಕಾಗಿ.
2. ಆರ್ಥಿಕ ಸಲಹೆಗಾರರು, ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಲೆಕ್ಕ ಮತ್ತು ಸಂಪನ್ಮೂಲ, ನಿಯಂತ್ರಣ ವ್ಯವಹಾರಗಳು, ಆಂತರಿಕ ಪರಿಶೋಧನೆ, ನಿಗಮ ಕಾರ್ಯಾಲಯ, ಕವಿಪ್ರನಿನಿ., ಕಾವೇರಿ ಭವನ, ಬೆಂಗಳೂರುರವರ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು(ವಿ)/ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಪ್ರಸರಣ (ಕಾ ಮತ್ತು ನಿ), ಕವಿಪ್ರನಿನಿ., ರವರ ಸೂಕ್ತ ಕ್ರಮಕ್ಕಾಗಿ.
4. ಅಧೀಕ್ಷಕ ಇಂಜಿನಿಯರು(ವಿ), ಐಟಿ ಶಾಖೆ, ನಿಗಮ ಕಾರ್ಯಾಲಯ, ಕಾವೇರಿ ಭವನ, ಕವಿಪ್ರನಿನಿ., ಬೆಂಗಳೂರು – ಸದರಿ ಸುತ್ತೋಲೆಯನ್ನು ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.
5. ಉಪ ಪ್ರಧಾನ ವ್ಯವಸ್ಥಾಪಕರು(ಕಾನೂನು), ನಿಗಮ ಕಾರ್ಯಾಲಯ, ಕಾವೇರಿ ಭವನ, ಕವಿಪ್ರನಿನಿ., ಬೆಂಗಳೂರುರವರ ಮಾಹಿತಿಗಾಗಿ.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು(ವಿ)/ಲೆಕ್ಕಾಧಿಕಾರಿಗಳು, ಬೃಹತ್ ಕಾಮಗಾರಿ ವಿಭಾಗಗಳು/ಟಿಎಲ್ ಅಂಡ್ ಎಸ್‌ಎಸ್ ವಿಭಾಗಗಳು, ಕವಿಪ್ರನಿನಿರವರ ಸೂಕ್ತ ಕ್ರಮಕ್ಕಾಗಿ.
7. ಕಂಪನಿ ಕಾರ್ಯದರ್ಶಿಗಳು, ನಿಗಮ ಕಾರ್ಯಾಲಯ, ಕಾವೇರಿ ಭವನ, ಕವಿಪ್ರನಿನಿ., ಬೆಂಗಳೂರುರವರ ಮಾಹಿತಿಗಾಗಿ. 8. ಮು.ಕ.


Insolvency and Bankruptcy B
ibbi.gov.in/en
HOME | SITEMAP
SKIP TO MAIN CONTENT | SCREEN READER ACCESS
Insolvency and Bankruptcy Board of India
2nd International Research Conference
Register Now
G20
Azadi Ka Amrit Mahotsav
Whats New
Subscribe
Company Specific Subscription
View All
IBBI IIMA International Research Conference on Insolvency and Bankruptcy on 1st May 2022 at IIM Ahemdabad
QUICK LINKS
Grievances / Complaints Login
IP/RV Login
TENDER
OTHER STAKEHOLDERS
FAQs
ENGAGEMENT WITH ACADEMIA
INTIMATION OF APPLICATION
CORPORATE PROCESSES
Type here to search
29°C Sunny
ENG
13:36
21-02-2023


Insolvency and Bankruptcy B
ibbi.gov.in/en/claims/corporate-personals
HOME | SITEMAP
SKIP TO MAIN CONTENT | SCREEN READER ACCESS
Insolvency and Bankruptcy Board of India
2nd International Research Conference
G20
Azadi Ka Amrit Mahotsav
CORPORATE PROCESSES
Home > Corporate Processes
To retrieve data pertaining to a particular CD, please provide details and click relevant link or click the link/sub name to fetch the complete available records
Corporate Debtor Master Data
Corporate Debtor Name
Corporate Debtor CIN No.
SUBMIT
CLEAR ALL
Public Announcement
Claims
Invitation of Resolution Plan
Auction Notices
Orders
Copyright © 2018. All Rights Reserved
This is the Official Website of the Insolvency and Bankruptcy Board of India designed and developed by IBBI & hosted by National Informatics Centre (NIC)
Type here to search
30°C Sunny
ENG
13:28
21-02-2023




**Formatted:** Font color: Red